**ದ್ವಂದ್ವದಿಂದ ಕೂಡಿದೆ ಎನ್ನುವ ಮಾತು ಆಗಾಗ ಕೇಳಿಬರುತ್ತದೆ. ಇದರ ಬಗ್ಗೆ ಏನು ಹೇಳುತ್ತೀರಿ?**

ಯಾವುದೇ ಧ್ವಜವನ್ನು ಹಿಡಿದ ಮಾತ್ರಕ್ಕೆ ಆ ವ್ಯಕ್ತಿಯ ವಿಚಾರಧಾರೆ ಅತ್ಯಂತ ಸ್ಪಷ್ಟವಾಗಿದೆ ಎಂದು ಹೇಳಲಾಗದು. ಧ್ವಜ ಹಿಡಿದುಕೊಂಡು ಓಡಾಡುವವರು ಆಗಾಗ, ಸಂದರ್ಭಕ್ಕೆ ಅನುಗುಣವಾಗಿ ತಮ್ಮ ಕೈಯಲ್ಲಿರುವ ಧ್ವಜವನ್ನು ಬದಲಿಸಿಬಿಡುತ್ತಾರೆ. ಇನ್ನೊಬ್ಬರ ಬಗ್ಗೆ ಟೀಕೆ ಮಾಡುವವರು ಇದೇ ಸ್ವಭಾವದವರಾಗಿರುತ್ತಾರೆ. ಅಂತಹವರ ಬಗ್ಗೆ ಯೋಚಿಸುವುದು ನನ್ನ ಜಾಯಮಾನವಲ್ಲ. ಒಂದು ವಿಷಯವೇನೆಂದರೆ, 'ಮನೆ'ಯಿಂದ ಹೊರಕ್ಕೆ ಬರುವ ಪ್ರತಿಯೊಬ್ಬ ವ್ಯಕ್ತಿಯೂ ಯಾವುದಾದರೂ ಒಂದು ವಿಚಾರಧಾರೆಯನ್ನು ಹೊಂದಿರುತ್ತಾನೆ. ಆದರೆ ಆತ ಹೇಳುವ ವಿಚಾರಗಳಿಗೂ, ಆತನ ನಡತೆಗೂ ಸಂಬಂಧವಿದೆಯೇ ಅಥವಾ ಇಲ್ಲವೇ ಎನ್ನುವುದಷ್ಟೇ ಮುಖ್ಯ. ನಾನು ನನ್ನ ವಿಚಾರಧಾರೆಯ ವಿಷಯದಲ್ಲಿ ಯಾವತ್ತೂ ಹೊಂದಾಣಿಕೆ ಮಾಡಿಕೊಂಡಿಲ್ಲ. ಕೆಲವರು ನನ್ನ ಕವನಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆಯೂ ಇರಬಹುದು. ಆ ಕಾರಣದಿಂದಾಗಿಯೇ ಅವರು ಇಂತಹ ವಿಷಯವನ್ನು ಪ್ರಸ್ತಾಪಿಸಿರಬಹುದು.

◆ **ನೀವು ಜನಿಸಿದ ಸ್ಥಳ ಹಾಗೂ ಈಗ ವಾಸವಾಗಿರುವ ರಾಯಪುರ ಎರಡೂ ಛತ್ತೀಸಗಢ ರಾಜ್ಯಕ್ಕೆ ಸೇರಿವೆ. ಇಲ್ಲಿ ಬುಡಕಟ್ಟು ಜನರ ಬಾಹುಳ್ಯ ಅಧಿಕವಾಗಿದೆ. ಅಶಿಕ್ಷಿತರ ಪ್ರಮಾಣವೂ ಗಣನೀಯವಾಗಿದೆ. ನಕ್ಸಲರ ಹಾವಳಿಯೂ ದೇಶದ ಗಮನ ಸೆಳೆಯುವ ಮಟ್ಟದಲ್ಲಿದೆ. ನಿಮ್ಮಿಂದಾಗಿ ಈಗ ಈ ರಾಜ್ಯಕ್ಕೆ ಜ್ಞಾನಪೀಠ ಗೌರವ ಪ್ರಾಪ್ತವಾಗಿದೆ. ಏನನ್ನಿಸುತ್ತದೆ?**

ಮಧ್ಯಪ್ರದೇಶದ ಒಂದು ಭಾಗವಾಗಿದ್ದ ಈ ಪ್ರದೇಶ ಇಪ್ಪತ್ತೈದು ವರ್ಷಗಳ ಹಿಂದೆ ಪ್ರತ್ಯೇಕ ರಾಜ್ಯದ ಸ್ಥಾನಮಾನ ಪಡೆದುಕೊಂಡಿತು. 'ಛತ್ತೀಸ್‌ಗರಿ' ಭಾಷೆಯನ್ನು ಮಾತನಾಡುವ ಪ್ರದೇಶವಾದ್ದರಿಂದ 'ಛತ್ತೀಸ್‌ಗಢ' ಎನ್ನುವ ಹೆಸರನ್ನು ಹೊಸ ರಾಜ್ಯಕ್ಕೆ ಇಡಲಾಯಿತು. ನಮ್ಮ ರಾಜ್ಯ ಸುಂದರ, ಮನೋಹರ. ಮುಖ್ಯವಾಗಿ ಇದು ಆದಿವಾಸಿಗಳ ಬೀಡು; ಪ್ರಾಚೀನ ಬುಡಕಟ್ಟು ಪರಂಪರೆಯ ತಾಣ. ಉರಾಂವ್, ಮುಂಡಾ, ಭುಮಿಯಾ, ಧನ್ವರ್, ಖೈರ್ವರ್, ಗೊಂಡ, ಬೈಗಾ, ಖರಿಯ, ಬಿರಹೋರ್, ಅಗರಿಯಾ ಸೇರಿದಂತೆ 43 ಬುಡಕಟ್ಟುಗಳು ಇಲ್ಲಿನ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿವೆ. ಇಲ್ಲಿನ ಬಮಲೇಶ್ವರಿ ದೇವಾಲಯ ಹಾಗೂ ಬೆಟ್ಟದ ಮೇಲಿರುವ ಪಟಾಲ ಭೈರವಿ ಮಂದಿರಗಳು ಪ್ರಸಿದ್ಧ ಪ್ರವಾಸಿ ತಾಣಗಳು. ನವರಾತ್ರಿಯ ಸಂದರ್ಭದಲ್ಲಿ ದೇಶದ ವಿವಿಧ ಮೂಲೆಗಳಿಂದ ಪ್ರವಾಸಿಗರು ಇಲ್ಲಿಗೆ ಆಗಮಿಸುತ್ತಾರೆ. ಆದರೆ ನಮ್ಮ ರಾಜ್ಯದಲ್ಲಿ ನಕ್ಸಲ್ ಪಿಡುಗು ಅಧಿಕವಾಗಿರುವುದು ಬೇಸರದ



ಸಂಗತಿ. ಏಕೆಂದರೆ ನಾವು ಈ ಭೂಮಿತಾಯಿಯ ಮಕ್ಕಳು. ಪರಸ್ಪರ ಕಚ್ಚಾಡಿಕೊಂಡಿರುವುದರಲ್ಲಿ ಯಾವುದೇ ಅರ್ಥವೂ ಇಲ್ಲ. ಬಂದೂಕಿಗೆ ಬಂದೂಕು ಯಾವತ್ತೂ ಉತ್ತರವಾಗಬಾರದು. ಶಾಂತಿ ಮಾತುಕತೆ ಮೂಲಕ ಎಲ್ಲಾ ಸಮಸ್ಯೆಗಳು ಪರಿಹಾರಗೊಳ್ಳಬೇಕು. ಉಗ್ರವಾದವನ್ನು ನಾನು ಎಂದಿಗೂ ಬೆಂಬಲಿಸುವುದಿಲ್ಲ.

ನನ್ನಿಂದ ನಮ್ಮ ರಾಜ್ಯಕ್ಕೆ ಜ್ಞಾನಪೀಠ ಪ್ರಶಸ್ತಿ ದೊರಕಿದ ಬಗ್ಗೆ ತುಂಬಾ ಹೆಮ್ಮೆಯಿದೆ. ನಮ್ಮ ರಾಜ್ಯದಲ್ಲಿ ಸಾಕ್ಷರತೆಯ ಪ್ರಮಾಣವನ್ನು ಹೆಚ್ಚಿಸುವ